KABD030055942022

**2ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಬೀದರ.**

**ಉಪಸ್ಥಿತರುಃ ಶ್ರೀ ದೇವರೆಡ್ಡಿ.,** *ಬಿ.ಎ., ಎಲ್‌ಎಲ್.ಬಿ., ಎಲ್‌ಎಲ್.ಎಂ.*

**2ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿ, ಬೀದರ.**

**ಅಪರಾಧ ಪ್ರಕರಣ ಸಂಖ್ಯೆಃ 7943/2023**

**ತೀರ್ಪಿನ ದಿನಾಂಕ 06 ನೇ ಆಗಸ್ಟ್ - 2025.**

| | | |
|---|---|---|
| **ಪಿರ್ಯಾದಿದಾರರು** | **:** | ಕರ್ನಾಟಕ ಸರ್ಕಾರದ ಪರವಾಗಿ ಅರಕ್ಷಕ ಉಪ ನಿರೀಕ್ಷಕರು, ಅಬಕಾರಿ ಪೊಲೀಸ್ ಠಾಣೆ, ಬೀದರ .<br>**(ಸಹಾಯಕ ಸರ್ಕಾರಿ ಅಭಿಯೋಜಕರು)** |
| **// VS //** | | |
| **ಆರೋಪಿತರು** | **:** | ಆ-1 ವೀರಶೇಟ್ಟಿ ತಂದೆ ಕಿಶನ ರಾಠೋಡ, ವ: 27 ವರ್ಷ, ಉ: ಕೂಲಿ, ವಾಸಃ ಸಿಂದೋಲ ತಾಂಡಾ, ತಾ:ಜಿ: ಬೀದರ.<br>ಆ-2 ಆನಂದ ತಂದೆ ಕಿಶನ ರಾಠೋಡ, ವ: 23 ವರ್ಷ, ಉ: ಕೂಲಿ, ವಾಸಃ ಸಿಂದೋಲ ತಾಂಡಾ, ತಾ:ಜಿ: ಬೀದರ.<br>**(ಆರೋಪಿಯ ಪರ ಶ್ರೀ ಹೆಚ್.ಬಿ.ಹೆಚ್. ವಕೀಲರು)** |

| | | | |
|---|---|---|---|
| 1 | ಅಪರಾಧ ನಡೆದ ದಿನಾಂಕ | : | 20-02-2022 |
| 2 | ಅಪರಾಧ ವರಧಿ ಆದ ದಿನಾಂಕ | : | 20-02-2022 |
| 3 | ಪಿರ್ಯಾದುದಾರರ ಹೆಸರು | : | ನರೇಂದ್ರ |
| 4 | ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 20-01-2025 |
| 5 | ಸಾಕ್ಷ್ಯ ಮುಕ್ತಾಯವಾದ ದಿನಾಂಕ | : | 23-04-2025 |

| | | | |
|---|---|---|---|
| 6 | ಆರೋಪಿತರ ಮೇಲೆ ಹೊರಿಸಲಾದ ಅಪರಾದ | : | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ |
| 7 | ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ. |

**(ಶ್ರೀ ದೇವರೆಡ್ಡಿ)**
***2*ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.**
**ದಂಡಾಧಿಕಾರಿ, ಬೀದರ.**

**-:: ತೀರ್ಪು ::-**

ತನಿಖಾಧಿಕಾರಿಗಳು, ಅಬಕಾರಿ ಪೊಲೀಸ್ ಠಾಣೆ, ಬೀದರ ಇವರು ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 11, 13, 14, 15, 32(1), 38(ಎ) ಮತ್ತು 43 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

02. <u>ಈ ಪ್ರಕರಣದ ಸಂಕ್ಷಿಪ್ತ ವಿವರವು ಈ ಕೆಳಗಿನಂತೆ ಇರುತ್ತದೆ</u>

ದಿನಾಂಕ 20-02-2022 ರಂದು ಸ.5.45 ಗಂಟೆ ಸಮಯದಲ್ಲಿ ಬೀದರ ತಾಲ್ಲೂಕಿನ ಮರಕುಂದಾ ಗ್ರಾಮದ ರಾಷ್ಟ್ರೀಯ ಹೆದ್ದಾರಿ 65ರ ಓವರ ಬ್ರಿಡ್ಜ ಹತ್ತಿರ ಗಸ್ತು ಮಾಡುತ್ತಿರುವಾಗ ಒಂದು ದ್ವಿ ಚಕ್ರವಾಹನ ಬರುತ್ತಿರುವುದನ್ನು ಚಾಸಾ-1 ಮತ್ತು ಅವರ ಸಿಬ್ಬಂದಿಗಳು ಕಂಡು ಅದನ್ನು ಸಂಶಯಗೊಂಡು ನಿಲ್ಲಿಸಲು ಸೂಚಿಸಿದಾಗ ಆರೋಪಿತರು ಸಮವಸ್ತ್ರದಲ್ಲಿರುವುದನ್ನು ಕಂಡು ವಾಹನದಲ್ಲಿ ಇದ್ದ ಆರೋಪಿತರಲ್ಲಿ ಹಿಂಬಾಗದಲ್ಲಿ ಕುಳಿತಿರುವ ಆರೋಪಿತನು ವಾಹನದಿಂದ ಜಿಗಿದು ಓಡಿ ಹೋಗಿ ಪರಾರಿಯಾಗಿರುತ್ತಾನೆ. ನಂತರ ವಾಹನ ಚಲಾಯಿಸಿರುತ್ತಿರುವ ಆರೋಪಿತನು ಓಡಿ ಹೋಗಲು ಪ್ರಯತ್ನಿಸಿದಾಗ ಆತನನ್ನು ಹಿಡಿದು ದ್ವಿಚಕ್ರವಾಹನ ಸಂಖ್ಯೆ: ಕೆ.ಎ-38-ಡ್ಬ್ಲಾಯ-1099 ನೇದ್ದರ ಪೆಟ್ರೋಲ ಟ್ಯಾಂಕ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಚೀಲವನ್ನು ಇರುವುದು

ಕಂಡುಬಂದಿರುತ್ತದೆ. ಸದರಿ ಚೀಲವನ್ನು ಶೋಧನೆ ಮಾಡಿ ನೋಡಿದಾಗ ಅದರಲ್ಲಿ ಸುಮಾರು ತಲಾ 500 ಎಮ್.ಎಲ್ ನಂತೆ 28 ಪ್ಲಾಸ್ಟಿಕ ಪ್ಯಾಕೇಟಗಳಲ್ಲಿ ಕಳ್ಳಭಟ್ಟಿ ಸರಾಯಿ ಇರುವುದು ಕಂಡುಬಂದಿರುತ್ತದೆ. ಮುಂದುವರೆದು ಆರೋಪಿಯು ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಮದ್ಯ ಮಾರಾಟ ಮಾಡಲು ತೆಗೆದುಕೊಂಡು ಹೋಗಿರುತ್ತಾರೆಂದು. ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 11, 13, 14, 15, 32(1), 38(ಎ) ಮತ್ತು 43 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾನೆ ಎಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

03. ಆರೋಪಿತರು ನ್ಯಾಯಾಲಯದಲ್ಲಿ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ ಆರೋಪಿತರಿಗೆ ಅಭಿಯೋಜನಾ ದಾಖಲೆಗಳನ್ನು ನೀಡಲಾಯಿತು, ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಅದರ ಸಾರಾಂಶವನ್ನು ಆರೋಪಿತರಿಗೆ ಓದಿ ವಿವರಿಸಿ ತಿಳಿಸಿ ಹೇಳಿದಾಗ, ಆರೋಪಿತರು ತಮ್ಮ ವಿರುದ್ದ ಆಪಾದಿಸಿದ ದೋಷಾರೋಪಣೆಗಳು ಸುಳ್ಳು ಇರುತ್ತವೆಂದು ವಾದಿಸಿ ಪ್ರಕರಣದ ಬಗ್ಗೆ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ. ಆದ್ದರಿಂದ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಾಯಿತು.

04. ಆರೋಪಿತರ ಮೇಲಿನ ಆರೋಪವನ್ನು ರುಜುವಾತುಪಡಿಸಲು ಅಬಿಯೋಜನೆಯು ಪ್ರಾ.ಸಾ.-1 ರಿಂದ ಪ್ರಾ.ಸಾ.-6 ರವರನ್ನು ನ್ಯಾಯಾಲಯದ ಮುಂದೆ ವಿಚಾರಣೆಗೊಳಪಡಿಸಿ, ನಿ.ಪಿ.-1 ರಿಂದ ನಿ.ಪಿ.-13 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ಮುದ್ದೆಮಾಲುಗಳನ್ನು ಮು.ಮಾ.-1 ಎಂದು ಗುರುತಿಸಿಕೊಂಡಿರುತ್ತಾರೆ.

05. ಅಭಿಯೋಜನೆಯ ಪರವಾಗಿ ಸಾಕ್ಷಿಗಳ ವಿಚಾರಣೆಯ ನಂತರ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ, ಆರೋಪಿತರ ವಿರುದ್ದ ಸಾಕ್ಷ್ಯದ ಸಾರಾಂಶವನ್ನು ಆರೋಪಿಗೆ

ಓದಿ, ತಿಳಿಸಿ ಹೇಳಲಾಯಿತು. ಆರೋಪಿತರು ತಮ್ಮ ವಿರುದ್ಧದ ಸಾಕ್ಷಿಯು ಸುಳ್ಳಾಗಿರುತ್ತದೆ ಎಂದು ಹೇಳಿರುತ್ತಾನೆ ಹಾಗೂ ತಮ್ಮ ಪರ ಯಾವುದೇ ಸಾಕ್ಷ್ಯ ಇಲ್ಲ ಎಂದು ಹೇಳಿರುತ್ತಾರೆ.

06. ಸಹಾಯಕ ಸರ್ಕಾರಿ ಅಭಿಯೋಜಕರಿಂದ ಹಾಗೂ ಆರೋಪಿತರ ಪರ ವಕೀಲರಿಂದ ವಾದ-ಪ್ರತಿವಾದವನ್ನು ಆಲಿಸಲಾಯಿತು ಹಾಗೂ ಸಂಪೂರ್ಣ ಕಡತವನ್ನು ಪರಿಶೀಲಿಸಲಾಯಿತು.

07. ಆರೋಪಿತರು ತಮ್ಮ ಮೇಲೆ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ನಿರಾಕರಿಸಿರುವುದರಿಂದ. ಈ ಕೆಳಗಿನ ಅಂಶಗಳು ನ್ಯಾಯಾಲಯದ ತೀರ್ಮಾನಕ್ಕಾಗಿ ಉದ್ಭವಿಸಿರುತ್ತವೆ.

1) ದಿನಾಂಕ 20-02-2022 ರಂದು ಸ.5.45 ಗಂಟೆ ಸುಮಾರಿಗೆ ಬೀದರ ತಾಲೂಕಿನ ಮರಕುಂದಾ ಗ್ರಾಮದ ರಾ.ಹೆದ್ದಾರಿ-65 ರ ಓವರ ಬ್ರಿಡ್ಜ ಹತ್ತಿರ ಆರೋಪಿತರು ಸರ್ಕಾರದ ಯಾವುದೇ ಪರವಾನಿಗೆ ಅಥವಾ ರಹದಾರಿ ಇಲ್ಲದೇ, ದ್ವಿಚಕ್ರ ವಾಹನ ಸಂಖ್ಯೆ:ಕೆ.ಎ-38-ವಾಯ್-1099 ನೇದರಲ್ಲಿ ಒಂದು ಚೀಲದಲ್ಲಿ ಸುಮಾರು ತಲಾ 500 ಎಮ್.ಎಲ್.ನಂತೆ 28 ಪ್ಲಾಸ್ಟಿಕ ಪ್ಯಾಕೇಟಗಳಲ್ಲಿ ಕಳ್ಳಭಟ್ಟಿ ಸರಾಯಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಅಕ್ರಮವಾಗಿ ಕಳ್ಳು ಸಾಗಣಿಕೆ ಮಾಡಿರುತ್ತಾರೆ.ಅವುಗಳನ್ನು ಆರೋಪಿತನು ಯಾವುದೇ ಪರವಾನಿಗೆ ಇಲ್ಲದೆ ಮಾರಾಟ ಮಾಡುವ ಉದ್ದೇಶದಿಂದ ಅನಧಿಕೃತವಾಗಿ ಸಾಗಾಣಿಕೆ ಮಾಡುತ್ತಿದ್ದು. ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 32(1) ಮತ್ತು 38(ಎ) ರನ್ವಯ ದಂಡನೀಯವಾದ ಅಪರಾಧವನ್ನು ಆತನು ಮಾಡಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವವರೇ**?**

2) ಏನು ಆದೇಶ?

08. ಮೇಲಿನ ಅಂಶಗಳಿಗೆ ಈ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇರುತ್ತವೆ.

ಅಂಶ ನಂ.1 : ನಕಾರಾತ್ಮಕವಾಗಿ
ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಗಿನ
ಕಾರಣಗಳಿಗಾಗಿಃ

**ಕಾರಣಗಳು**

09. ಅಂಶ 1: ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾ ರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

10. ಆರೋಪಿತರ ವಿರುದ್ದ ಆಪಾದಿಸಿದ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾ.ಸಾ.-1 ರಿಂದ ಪ್ರಾ.ಸಾ.-6 ರವರನ್ನು ಸಾಕ್ಷಿಗಳಾಗಿ ವಿಚಾರಣೆ ಮಾಡಿ ನಿ.ಪಿ.-1 ರಿಂದ ನಿ.ಪಿ.-13 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ಮುದ್ದೆಮಾಲುಗಳನ್ನು ಮು.ಮಾ.-1 ಎಂದು ಗುರುತಿಸಿಕೊಂಡಿರುತ್ತಾರೆ. ನಿ.ಪಿ.-1 ಶೋಧನೆ ಸಮುಚಿತ ಆಧಾರ ಪತ್ರ, ನಿ.ಪಿ-2 ಪಂಚನಾಮೆ, ನಿ.ಪಿ.-3 ಮಾದರಿ ಮುದ್ರೆ, ನಿ.ಪಿ-4 ಸ್ವತ್ತಿನ ಪಟ್ಟಿ , ನಿ.ಪಿ-5 ಸರಕಾರದ ತರ್ಪೆ ಪಿರಿಯಾದಿ, ನಿ.ಪಿ-6 ಪ್ರಥಮ ವರ್ತಮಾನ ವರದಿ, ನಿ.ಪಿ-7,8,9 ವಸ್ತುಗಳ ಪಟ್ಟಿ, ನಿ.ಪಿ-10ರಾಸಾಯನಿಕ ಪರೀಕ್ಷೆ ವರದಿ, ನಿ.ಪಿ-11 ವಾನದ ಮಾಲಿಕತ್ವದ ಪತರ, ನಿ.ಪಿ-12 ಬಿ ಎಕ್ಸ್ಟ್ರಾಕ್ಟ ಮತ್ತು ನಿ.ಪಿ-13 ಎಫ್.ಎಸ್.ಎಲ್ ವರದಿ ಮತ್ತು ಮು.ಮಾ.-1.

11. ಅಭಿಯೋಜನೆಯ ಪ್ರಕರಣದ ಪಿರ್ಯಾದುದಾರರು ಮತ್ತು ಪಿ.ಎಸ್.ಐ ಅವರನ್ನು ಪ್ರಾ.ಸಾ-1 ಎಂದು ಸಾಕ್ಷವನ್ನ ಮಾಡಿಸಿಕೊಂಡಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 22-02-2022 ರಂದು ಬೀದರ ತಾಲೂಕಿನ ಮನ್ನಖೇಳಿ ಕ್ರಾಸ್ ಹತ್ತಿರ ರಸ್ತೆ ಗಸ್ತು ಮಾಡುತ್ತಿರುವಾಗ, ಮರಕುಂದಾ ಗ್ರಾಮದಿಂದ ದ್ವಿಚಕ್ರವಾಹನದಲ್ಲಿ ಕಳಬಟ್ಟಿ ಸರಾಯಿ ಸಾಗಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಪ್ರಕಾರ ಮರಕುಂದಾ ಗ್ರಾಮಕ್ಕೆ ಹೋಗಿ ನಂತರ ಅವರು, ಅವರ ಸಿಬ್ಬಂದಿ ಮತ್ತು ಪಂಚರೊಂದಿಗೆ ತಮ್ಮ ಇಲಾಖಾ ವಾಹನದಲ್ಲಿ ಮರಕುಂದಾಗ ಗ್ರಾಮ ಎನ್.ಹೆಚ್.65 ರಾಷ್ಟ್ರೀಯ ಹೆದ್ದಾರಿಯಲ್ಲಿ ಓವರ್ ಬ್ರೀಡಜ್ ಹತ್ತಿರ ಸ್ವಲ್ಪ ದೂರದಲ್ಲಿ ರಸ್ತೆಗಾವಲು ಮಾಡುತ್ತಿರುವಾಗ ಸಂಜೆ 5.10 ಗಂಟೆ ಸುಮಾರಿಗೆ ದ್ವಿ-ಚಕ್ರವಾಹನದಲ್ಲಿ ಇಬ್ಬರು ವ್ಯಕ್ತಿಗಳು ಕುಂತು ಬರುವುದು ಕಂಡು ಬಂದಾಗ ಅವರು ಅವರ ಸಿಬ್ಬಂದಿಯ ಸಹಾಯದಿಂದ ಕೈ ಸನ್ನೆ ಮಾಡಿ, ಅವರನ್ನು

ನಿಲ್ಲಿಸಲು ಕೇಳಿದಾಗ, ವಾಹನದ ಹಿಂದೆ ಕುಳಿತಿದ್ದ ಒಬ್ಬ ವ್ಯಕ್ತಿ ವಾಹನದಿಂದ ಜಿಗಿದು ಓಡಿ ಹೋಗಿರುತ್ತಾನೆ ಎಂದು ನುಡಿದಿರುತ್ತಾರೆ. ಮುಂದುವರೆದು ಆ ದಿನ ಓಡಿ ಹೋದ ವ್ಯಕ್ತಿಯು ಈ ಪ್ರಕರಣದ 2ನೇ ಆರೋಪಿ ಆಗಿರುತ್ತಾರೆ. ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಒಂದು ಬಿಳಿ ಚೀಲದಿಂದ ಕಲಬಟ್ಟಿ ಸರಾಯಿ ವಾಸನೆ ಬರುತ್ತಿತ್ತು ಎಂದು ನುಡಿದಿರುತ್ತಾರೆ. ಮುಂದುವರೆದು ಸ್ಥಳದಲ್ಲಿ ಪಂಚರ ಸಮಕ್ಷಮ ಶೋಧನಾ ಸಮೂಚಿತ ಆಧಾರ ಪತ್ರವನ್ನು ತಯಾರಿಸಿ, ಸದರಿ ಚೀಲವನ್ನು ಸಂಜೆ 5.45 ಗಂಟೆಗೆ ಪರಿಶೀಲಿಸಿದಾಗ, ಅದರಲ್ಲಿ ತಲಾ 500 ಎಮ್.ಎಲ್.ನಂತೆ 28 ಪ್ಲಾಸ್ಟಿಕ್ ಪಾಕೇಟ್‌ಗಳಲ್ಲಿ ಸುಮಾರು 14 ಲೀಟರ್ ಕಲಬಟ್ಟಿ ಸರಾಯಿ ಇರುವುದು ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ವಾಹನವು ಹಿರೋ ಕಂಪನಿಯ ಸ್ಪಲೆಂಡರ್ ಪ್ಲಾಸ್ ಅದರ ನೋಂದಣಿ ಸಂಖ್ಯೆ: ಕೆಎ 38 -ವಾಯ್-1099 ಇದ್ದು 1ನೇ ಆರೋಪಿಯ ಜೇಬಿನಲ್ಲಿ ಪರಿಶೀಲಿಸಿದಾಗ, ಅವನ ಹತ್ತಿರ ರೇಡ್‌ಮಿ ಕಂಪನಿಯ ಮೊಬೈಲ್ ಇರುವುದು ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಮೊಬೈಲ್ ಓಡಿ ಹೋದ 2ನೇ ಆರೋಪಿಗೆ ಸೇರಿರುತ್ತದೆ ಎಂದು 1ನೇ ಆರೋಪಿ ತಿಳಿಸಿರುತ್ತಾರೆ. 1ನೇ ಆರೋಪಿಯನ್ನು ವಿಚಾರಿಸಿದಾಗ, ಸದರಿ ಕಲಬಟ್ಟಿ ಸರಾಯಿ ಸಿಂದೋಲ ತಾಂಡಾದಲ್ಲಿರುವ ತನ್ನ ಮನೆಯಲ್ಲಿ ತಯಾರಿಸಿ, ಮಾರಾಟಕ್ಕಾಗಿ ಸಾಗಾಟ ಮಾಡುತ್ತಿದ್ದೇನೆ ಎಂದು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ 1ನೇ ಆರೋಪಿ ಹತ್ತಿರ ಯಾವುದೇ ಪರವಾನಿಗೆ ಇರಲಿಲ್ಲ, ಹಾಗಾಗಿ ಅವುಗಳನ್ನು ಜಪ್ತಿ ಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ ಪ್ರತಿಯೊಂದು ಪ್ಯಾಕೇಟ್‌ನಿಂದ ಕೂಡಿ 1 ಲೀಟರ್ ನಷ್ಟು ಕಲಭೆಟ್ಟಿ ಸರಾಯಿ ಒಂದು ಪ್ಲಾಸ್ಟಿಕ್ ಬಾಟಲ್‌ನಲ್ಲಿ ಪಡೆದು, ಅವರ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅದರ ಮೇಲೆ ಅಂಟಿಸಿ, ಅದರ ಮೇಲೆ 416 ರಿಂದ ಸಿಲ್ ಮಾಡಿ, ಮಾದರಿ ಸಹಿ ಚೀಟಿಯನ್ನು ತಯಾರಿಸಿ ಪಂಚರ ಸಹಿ ಪಡೆದು, ಪಂಚನಾಮೆಯನ್ನು ಸಂಜೆ 5.45 ರಿಂದ 7.05 ಗಂಟೆಯವರೆಗೆ ಜರುಗಿಸಿರುವುದಾಗಿ ನುಡಿದಿರುತ್ತಾರೆ.

12. ನಂತರ ಮುದ್ದೆಮಾಲು, ಜಪ್ತಿ ಪಡಿಸಿಕೊಂಡಿರುವ ವಾಹನ, ಮೊಬೈಲ್‌ಗಳು ಮತ್ತು 1 ಮತ್ತು 2ನೇ ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ನಂತರ ಉಳಿದ ಮುದ್ದೆಮಾಲುಗಳು ತನ್ನ ತಾಬೆಯಲ್ಲಿ ಇಟ್ಟುಕೋಳ್ಳಲು ಅವರ ಮೇಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ಅನುಮತಿ ಪಡೆದು ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ10 ರವರಿಗೆ ವಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಒಂದು ಬಾಟಲ್ ನೋಡಿ ಗುರುತಿಸಿದ್ದು, ಅದನ್ನು ಮುಮಾ1 ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ಸಮೂಚಿತ ಆಧಾರ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಾದರಿ ಮುದ್ರೆ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಜಪ್ತಿ ಪಡಿಸಿಕೊಂಡಿರುವ ಮುದ್ದೆಮಾಲಿನ ಸ್ವತ್ತಿನ ಪಟ್ಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸರ್ಕಾರಿ ತರ್ಫೆ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 6 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು. ಮೇಲಾಧಿಕಾರಿಗಳಿಗೆ ಬರೆದ ಮೂರು ಅನುಮತಿ ಪತ್ರಗಳಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ. 7 ರಿಂದ 9 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ರಿಂದ 9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅಭಿಯೋಜನೆಯ ಪ್ರಕರಣದ ದಾಳಿಗೆ ಹೋದ ಪ್ರತ್ಯಕ್ಷ ಸಾಕ್ಷಿದಾರರಾದ

ಪೊಲೀಸ್ ರವರನ್ನ ಪ್ರಾ.ಸಾ.-4 ಎಂದು ಸಾಕ್ಷವನ್ನು ಮಾಡಿಸಿಕೊಂಡಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1ರವರು ಹೇಳಿರುವ ವಿಷಯವನ್ನೆ ಹೇಳಿರುತ್ತಾರೆ.

13. ಅಭಿಯೋಜನೆಯ ಪ್ರಕರಣದ ಪಂಚ ಸಾಕ್ಷಿದಾರರಾದ ಪ್ರಾ.ಸಾ.-2 ಮತ್ತು 3 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿದಾರರಾಗಿ ಸಾಕ್ಷ್ಯ ನುಡಿದಿರುತ್ತಾರೆ ಮತ್ತು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಅವರ ಗ್ರಾಮದ ರಾಷ್ಟ್ರೀಯ ಹೆದ್ದಾರಿ ಹತ್ತಿರ ಇದ್ದಾಗ ಕೆಲವೊಂದು ದಾಖಲೆಗಳ ಮೇಲೆ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಮುಂದುವರೆದು ಯಾವ ಕಾರಣಕ್ಕೆ ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಹಾಗೂ ಪೊಲೀಸರು ಅವರ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ ನುಡಿದಿರುತ್ತಾರೆ. ಮುಂದುವರೆದು ಸಾಕ್ಷಿಯು ನಿ.ಪಿ. 1 ರಿಂದ 4 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ. 1(ಬಿ & ಸಿ) ರಿಂದ 4(ಬಿ & ಸಿ) ಎಂದು ಗುರುತಿಸಲಾಯಿತು. ನಿಪಿ-1ರಿಂದ 4ರಲ್ಲಿ ಬರೆದಿರುವ ಬರೆದಿರುವ ವಿಷಯಗಳು ತಮ್ಮಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿಯವರನ್ನು ಅಭಿಯೋಜನೆಯವರು ಪಾಟಿ ಸವಾಲು ಮಾಡಿದಾಗ ಪಾಟಿ ಸವಾಲಿನಲ್ಲಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆದ್ದರಿಂದ ಪ್ರಾ.ಸಾ.-2 ಮತ್ತು 3ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಸಹಕಾರಿಯಾಗಿರುವುದಿಲ್ಲ.

14. ಅಭಿಯೋಜನೆಯ ಪ್ರಕರಣದ ಪರವಾಗಿ ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿದ್ದ ಮದ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್ ರಾಯಚೂರು ಇಲಾಖೆಗೆ ತೆಗೆದುಕೊಂಡು ಹೋಗಿದ್ದ ಪೊಲೀಸ್ ಪೇದೆಯವರನ್ನ ಪ್ರಾ.ಸಾ.-5 ಎಂದು ಸಾಕ್ಷವನ್ನ ಮಾಡಿಸಿಕೊಂಡಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡಿದ್ದ ಮು.ಮಾ-1 ನ್ನು ಎಫ್.ಎಸ್.ಎಲ್ ವರದಿಗಾಗಿ ರಾಯಚೂರಿಗೆ ತೆಗೆದುಕೊಂಡು ಹೋಗಿ ಮತ್ತು ಅದೇ ದಿನ ಮುದ್ದೆಮಾಲು ಮತ್ತು

ರಾಸಾಯನಿಕ ವಿಶ್ಲೇಷನ ವರದಿಯನ್ನು ಪಡೆದು ದಿನಾಂಕ: 08-04-2022 ರಂದು ಚಾಸಾ-10ರವರಿಗೆ ತಂದು ಒಪ್ಪಿಸಿರುವುತ್ತಾರೆ ಎಂದು ನುಡಿದಿರುತ್ತಾರೆ. ಸದರಿಯವರನ್ನು ಆರೋಪಿಪರ ವಕೀಲರು ಪಾಟಿ ಸವಾಲು ಮಾಡಿದಾಗ ಸಾಕ್ಷಿಯು ತನ್ನ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

15. ಅಭಿಯೋಜನೆಯ ಪ್ರಕರಣದ ತನಿಖಾಧಿಕಾರಿಯನ್ನು ಪ್ರಾ.ಸಾ.-6 ಎಂದು ಸಾಕ್ಷ್ಯವನ್ನ ಮಾಡಿಸಿದ್ದು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 28-03-2022 ರಂದು ಈ ಪ್ರಕರಣದ ಕಡತವನ್ನು ಚಾಸಾ1 ರವರಿಂದ ಪಡೆದುಕೊಂಡು, ಅದನ್ನು ಪರಿಶೀಲಿಸಿ, ಜಪ್ತಿ ಪಡಿಸಿಕೊಂಡಿರುವ ವಾಹನ ಸಂಖ್ಯೆ: ಕೆಎ 38 ವಾಯ್-1099 ರ ಮಾಲೀಕತ್ವದ ಕುರಿತು ಚಾಸಾ9 ರವರಿಗೆ ಪತ್ರ ಬರೆದಿರುತ್ತಾರೆ. ನಂತರ ಅವರಿಂದ ದಿನಾಂಕ: 13-04-2022 ರಂದು ವಾಹನದ ಬಿ-ಎಕ್ಸ್‌ಟ್ರ್ಯಾಕ್ಟ್ ಪಡೆದಿರುವುದಾಗಿ ನುಡಿದಿರುತ್ತಾರೆ. ಸದರಿ ಬಿ-ಎಕ್ಸ್‌ಟ್ರ್ಯಾಕ್ಟ್ ಪ್ರಕಾರ ವಾಹನವು 1ನೇ ಆರೋಪಿಯ ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ ಎಂದು ಹೇಳಿರುತ್ತಾರೆ. ಚಾಸಾ9 ರವರಿಗೆ ಬರೆದಿರುವ ಪತ್ರದಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 11 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 11(ಎ) ಎಂದು ಗುರುತಿಸಲಾಯಿತು. ಬಿ-ಎಕ್ಸ್‌ಟ್ರ್ಯಾಕ್ಟ್ ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 12 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 12(ಎ) ಎಂದು ಗುರುತಿಸಲಾಯಿತು. ಮುಂದುವರೆದು ದಿನಾಂಕ: 04-04-2022 ರಂದು ಈ ಪ್ರಕರಣದಲ್ಲಿ ಮಾದರಿಗಾಗಿ ಪಡೆದ ಮುದ್ದೆಮಾಲನ್ನು ಚಾಸಾ-7ರವರ ಮುಖಾಂತರ ರಾಸಾಯನಿಕ ಪ್ರಯೋಗಲಾಯ, ರಾಯಚೂರಗೆ ಕಳುಹಿಸಿ, ಅವರಿಂದ ದಿನಾಂಕ: 08-04-2022 ರಂದು ರಾಸಾಯನಿಕ ವಿಶ್ಲೇಷಣ ವರದಿ ಮತ್ತು ಮುದ್ದೆಮಾಲನ್ನು ಸ್ವೀಕರಿಸಿ ಸದರಿ ವರದಿಯ ಪ್ರಕಾರ ಮಾದರಿಯಲ್ಲಿ ಅಲ್ಕೋಹಾಲ್ ಅಂಶ ಪತ್ತೆ ಆಗಿದ್ದು, ಅದು ಮಾನವನ ಸೇವನೆಗೆ ಯೋಗ್ಯ ಆಗಿರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಸಾಕ್ಷಿಯು ನಿ.ಪಿ. 10 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು

ರಾಸಾಯನಿಕ ವಿಶ್ಲೇಷನ ವರದಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 13 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 13(ಎ) ಎಂದು ಗುರುತಿಸಲಾಯಿತು. ಮುಂದುವರೆದು ದಿನಾಂಕ: 04-05-2022 ರಂದು ದಾಳಿಯಲ್ಲಿ ಸಹಕರಿಸಿದ ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರ ಹೇಳಿಕೆ ಮತ್ತು ಚಾಸಾ-7ರವರ ಹೇಳಿಕೆ ಪಡೆದಿರುತ್ತಾರೆ. 2ನೇ ಆರೋಪಿತನು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು, ಕಛೇರಿಗೆ ಹಾಜರಾಗಿರುತ್ತಾರೆ. ತನಿಖೆ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಜಪ್ತಿ ಪಡಿಸಿಕೊಂಡಿರುವ ದ್ವಿ-ಚಕ್ರವಾಹನ ಮತ್ತು ಒಂದು ಭಾವ ಚಿತ್ರದಲ್ಲಿರುವ ವಾಹನ ನೋಡಿ ಗುರುತಿಸಿರುತ್ತಾರೆ ಹಾಗೂ ಮುಮಾ1 ನ್ನು ಮತ್ತು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

16. ಆರೋಪಿತರ ಪರ ವಕೀಲರ ಪ್ರತಿರಕ್ಷಣೆ ಏನಂದರೆ ಆರೋಪಿತರು ಅಭಿಯೋಜನೆಯು ಆರೋಪಿಸಿದಂತೆ ಅಕ್ರಮವಾಗಿ ದ್ವಿಚಕ್ರ ವಾಹನದಲ್ಲಿ ಮದ್ಯವನ್ನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರಲಿಲ್ಲ ಆದರೆ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುವುದಾಗಿ ಹೇಳಿರುತ್ತಾರೆ. ಈ ಪ್ರಕರಣದಲ್ಲಿ ನಿ.ಪಿ.-2 ರ ಪಂಚನಾಮೆಯ ಮಹಜರ್ ಸಾಕ್ಷಿದಾರರಾದ ಪ್ರಾ.ಸಾ.-2 ಮತ್ತು 3 ರವರು ನಿ.ಪಿ.-2 ರ ಅಂಶಗಳಿಗೆ ವಿರುದ್ದವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ ಮತ್ತು ತಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಎನನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದು ಪ್ರತಿಕೂಲವಾಗಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನಾ ಪಕ್ಷಗಾರರು ಪ್ರಾ.ಸಾ.-2 ಮತ್ತು 3 ರವರ ಮುಖಾಂತರ ನಿ.ಪಿ.-2 ರಲ್ಲಿರುವ ಅಂಶಗಳನ್ನ ಮತ್ತು ಮು.ಮಾ.-1 ನ್ನು ಆರೋಪಿತರಿಂದ ಅವರ ಸಮಕ್ಷಮ ಜಪ್ತುಪಡಿಸಿಕೊಂಡಿರುವುದನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

17. ಅಭಿಯೋಜನಾ ಪಕ್ಷದವರ ಪ್ರಕಾರ ಪ್ರಾಸಾ-1 ಮತ್ತು 4ರವರು ಅಬಕಾರಿ ಇಲಾಖೆಯ ಅಧಿಕಾರಿಗಳಾಗಿದ್ದು. ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಘಟನಾ ಸ್ಥಳದಲ್ಲಿ

ಸಾಕಷ್ಟು ಜನರು ಇರುತ್ತಾರೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಅಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುವುದಿಲ್ಲ ಮತ್ತು ಘಟನಾ ಸ್ಥಳದ ಯಾವುದೇ ಪೋಟೋಗಳನ್ನು ತೆಗೆದಿರುವುದಿಲ್ಲ. ಅದರೆ ಯಾವ ಉದ್ದೇಶಕ್ಕಾಗಿ ಮತ್ತು ಕಾರಣಗಳಿಂದ ಘಟನಾ ಸ್ಥಳದಲ್ಲಿರುವ ಸಾರ್ವಜನಿಕರನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ಪೋಟೋಗಳನ್ನು ತೆಗೆದುಕೊಂಡಿರುವುದಿಲ್ಲ ಎನ್ನುವುದರ ಬಗ್ಗೆ ಯಾವುದೇ ವಿವರಣೆಯನ್ನು ಸಹ ನೀಡಿರುವುದಿಲ್ಲ. ಆದ್ದರಿಂದ ಅಭಿಯೋಜನಾ ಪಕ್ಷಗಾರರು ಆರೋಪಿತರು ಅಕ್ರಮವಾಗಿ ಯಾವುದೇ ಪರವಾನಿಗೆಯನ್ನ ಹೊಂದದೆ ಕಳ್ಳ ಭಟಿ ಸರಾಯಿ ಮಾರಾಟ ಮಡುಲು ತೆಗೆದುಕೊಂಡು ಹೋಗುತ್ತಿದ್ದರು ಎನ್ನುವದನ್ನ ನಿಸ್ಸಂಶಯಾತೀತವಾಗಿ ಪಂಚಸಾಕ್ಷಿದಾರರಿಂದ ಮತ್ತು ಸ್ವತಂತ್ರ್ಯ ಪ್ರತ್ಯಕ್ಷ ಸಾಕ್ಷಿದಾರರಿಂದ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

18. ಲಭ್ಯವಿರುವ ಸಾಕ್ಷ್ಯದಾರರನ್ನು ಮತ್ತು ದಾಖಲೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅಭಿಯೋಜನಾ ಪಕ್ಷದವರು ಆರೋಪಿತರು ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಮದ್ಯಮಾರಟವನ್ನು ಮಾಡುತ್ತಿದ್ದನು ಮತ್ತು ಅದನ್ನ ಪ್ರಾ.ಸಾ.-2 ಮತ್ತು 3 ರವರ ಸಮಕ್ಷಮ ಮು.ಮಾ-1 ರಂತೆ ಜಪ್ತುಪಡಿಸಿಕೊಂಡಿರುವುದನ್ನ ನಿಸ್ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಪ್ರಾ.ಸಾ.-1, 4 ರಿಂದ 6ರವರು ಇಲಾಖಾ ಅಧಿಕಾರಿಗಳಾಗಿದ್ದು ಕೇವಲ ಸದರಿಯವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿತರ ಅಪರಾಧ ಮಾಡಿರುತ್ತಾರೆಂದು ನಂಬಲು ಆಗುವುದಿಲ್ಲ ಹಾಗೂ ಅಭಿಯೋಜನೆಯವರು ಆಪಾಧಿಸಿದಂತೆ ಆರೋಪಿಯು ಆಪರಾಧವನ್ನು ಮಾಡಿದ್ದಾನೆಂದು ಸಂಶಯಾತೀತವಾಗಿ ರುಜುವಾತು ಪಡಿಸುಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಸದರಿ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾದ ಆಪಾದನೆಯನ್ನು ಸಂಶಯತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುವುದಾರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಬಿಡುಗಡೆ ಮಾಡಿದಲ್ಲಿ ನ್ಯಾಯದಾನದ ವಿಫಲತೆಯುಂಟಾಗುವುದಿಲ್ಲವೆಂದು ಅಭಿಪ್ರಾಯಪಟ್ಟು ಅಂಶ ನಂ.1ನ್ನು **ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

19. **ಅಂಶಃ-2:** ಮೇಲಿನ ಕಾರಣಗಳಿಗಾಗಿ ಅಂಶ1 ನ್ನು ನಕಾರಾತ್ಮಕವಾಗಿ ಉತ್ತರಿಸಿ, ಅಂಶ -2ಕ್ಕೆ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

**<u>ಆದೇಶ</u>**

ದಂಡ ಪ್ರಕಿಯಾ ಸಂಹಿತೆ ಕಲಂ 248(1) ರಲ್ಲಿ ಪ್ರದತ್ತವಾದ ಅಧಿಕಾರದಡಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದಿಂದ 1 ಮತ್ತು 2ನೇ ಆರೋಪಿತರನ್ನು ದೋಷಮುಕ್ತರೆಂದು ಆದೇಶಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನಿನ ಸಮಯದಲ್ಲಿ ತೆಗೆದುಕೊಂಡಿರುವ ಜಾಮೀನು ಮುಚ್ಚಳಿಕೆಗಳು ರದ್ದುಗೊಳಿಸಲಾಗಿದೆ.

ಆರೋಪಿತನ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437-ಎ ರೀತ್ಯ 6 ತಿಂಗಳ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

ಮೇಲ್ಮನವಿ ಅವಧಿ ಮುಗಿದ ನಂತರ ಮು.ಮಾ.-1ನ ಸಂಬಂಧಪಟ್ಟ ಇಲಾಖೆಗೆ ಒಪ್ಪಿಸಲು ಈ ಮೂಲಕ ಆದೇಶಿಸಲಾಗಿದೆ.

(ಮೇಲಿನ ತೀರ್ಪುನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ್ದನ್ನು ನಾನು ಪರಿಶೀಲಿಸಿ ನಂತರ ಅಚ್ಚು ತೆಗೆದು, ನನ್ನ ಸಹಿಯೊಂದಿಗೆ ದಿನಾಂಕ 06-08.2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀ ದೇವರೆಡ್ಡಿ)**
**2ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.**
**ದಂಡಾಧಿಕಾರಿ, ಬೀದರ.**

**<u>ಅನುಬಂಧ</u>**

**<u>ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳುಃ</u>**

ಪ್ರಾ.ಸಾ.-1 : ನರೇಂದ್ರ.
ಪ್ರಾ.ಸಾ.-2 : ಬೀರಪ್ಪಾ.
ಪ್ರಾ.ಸಾ.-3 : ಪಾಂಡುರಂಗ.
ಪ್ರಾ.ಸಾ.-4 : ಅಪ್ಪಾರಡ್ಡಿ.

ಪ್ರಾ.ಸಾ.-5 : ಶಿವಶಂಕರ.
ಪ್ರಾ.ಸಾ.-6 : ದೇವಿದಾಸ ಭೋಸ್ಲೆ.

**ಅಭಿಯೋಜನೆ ಪರ ಹಾಜರಪಡಿಸಿದ ದಾಖಲೆಗಳು:-**

ನಿ.ಪಿ.-1 : ಶೋಧನಾ ಸಮುಚ್ಚಿತ ಆಧಾರ ಪತ್ರ.
ನಿ.ಪಿ.-1(ಎ ರಿಂದ ಸಿ) : ಸಹಿಗಳು.
ನಿ.ಪಿ.-2 : ಪಂಚನಾಮೆ.
ನಿ.ಪಿ.-2(ಎ ರಿಂದ ಸಿ) : ಸಹಿಗಳು.
ನಿ.ಪಿ.-3 : ಮಾದರಿ ಮುದ್ರೆ ಮತ್ತು ಸಹಿ ಚೀಟಿ.
ನಿ.ಪಿ.-3(ಎ ರಿಂದ ಸಿ) : ಸಹಿಗಳು.
ನಿ.ಪಿ.-4 : ಸ್ವತ್ತಿನ ಪಟ್ಟಿ.
ನಿ.ಪಿ.-4(ಎ ರಿಂದ ಸಿ) : ಸಹಿಗಳು.
ನಿ.ಪಿ.-5 : ಸರ್ಕಾರದ ತರ್ಫೆ ಫಿರ್ಯಾದಿ.
ನಿ.ಪಿ.-5(ಎ) : ಸಹಿ.
ನಿ.ಪಿ.-6 : ಪ್ರಥಮ ವರ್ತಮಾನ ವರದಿ.
ನಿ.ಪಿ.-6(ಎ) : ಸಹಿ.
ನಿ.ಪಿ.-7 ರಿಂದ 9 : ಸ್ವತ್ತಿನ ಪಟ್ಟಿಗಳು.
ನಿ.ಪಿ.-7(ಎ) ರಿಂದ 9(ಎ) : ಸಹಿಗಳು.
ನಿ.ಪಿ.-10 : ಎಫ.ಎಸ.ಎಲ್.ಗೆ ಕಳುಹಿಸಿದ ಅನುಮತಿ ಪತ್ರ.
ನಿ.ಪಿ.-10(ಎ & ಬಿ) : ಸಹಿಗಳು.
ನಿ.ಪಿ.-11 : ವಾಹನದ ಮಾಲಿಕತ್ವದ ಪತ್ರ.
ನಿ.ಪಿ.-11(ಎ) : ಸಹಿ.
ನಿ.ಪಿ.-12 : ಬಿ ಎಕ್ಸ್ಟ್ರಾ ಕ್ಟ.
ನಿ.ಪಿ.-12(ಎ) : ಸಹಿ.
ನಿ.ಪಿ.-13 : ರಾಸಾಯನಿಕ ಪರೀಕ್ಷೆ ವರದಿ.
ನಿ.ಪಿ.-13(ಎ ) : ಸಹಿಗಳು.

**ಆರೋಪಿತರ ಪರ ವಿಚಾರಣೆಗೆ ಒಳಪಟ್ಟ ಸಾಕ್ಷಿಗಳು:-** ಇಲ್ಲಾ

**ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳು:-** ಇಲ್ಲಾ

**ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮುದ್ದೆಮಾಲುಗಳು:-**

ಮು.ಮಾ.-1: ಖಾಲಿ ಬಾಟಲ.

**2ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.**
**ದಂಡಾಧಿಕಾರಿ, ಬೀದರ.**

**(ತೆರೆದ ನ್ಯಾಯಾಲಯದಲ್ಲಿ ಇಂದು ದಿಃ 06 ನೇ ಆಗಸ್ಟ್ 2025 ರಂದು ತೀರ್ಪನ್ನು ಘೋಷಿಸಲಾಯಿತು )**

**: ಆದೇಶ :**

ದಂಡ ಪ್ರಕಿಯಾ ಸಂಹಿತೆ ಕಲಂ 248(1) ರಲ್ಲಿ ಪ್ರದತ್ತವಾದ ಅಧಿಕಾರದಡಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದಿಂದ 1 ಮತ್ತು 2ನೇ ಆರೋಪಿತರನ್ನು ದೋಷಮುಕ್ತರೆಂದು ಆದೇಶಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನಿನ ಸಮಯದಲ್ಲಿ ತೆಗೆದುಕೊಂಡಿರುವ ಜಾಮೀನು ಮುಚ್ಚಳಿಕೆಗಳು ರದ್ದುಗೊಳಿಸಲಾಗಿದೆ.

ಆರೋಪಿತನ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437-ಎ ರೀತ್ಯ 6 ತಿಂಗಳ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

ಮೇಲ್ಮನವಿ ಅವಧಿ ಮುಗಿದ ನಂತರ ಮು.ಮಾ.-1ನ ಸಂಬಂಧಪಟ್ಟ ಇಲಾಖೆಗೆ ಒಪ್ಪಿಸಲು ಈ ಮೂಲಕ ಆದೇಶಿಸಲಾಗಿದೆ.

**2ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಬೀದರ.**